**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಂಡ್ಲುಪೇಟೆ**

**ಉಪಸ್ಥಿತರು**

**ಶ್ರೀ ದೀಪು ಎಂ.ಟಿ.** ಬಿ.ಎ.ಎಲ್. ಎಲ್.ಎಲ್.ಬಿ.,

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.**

**ದಿನಾಂಕ** : 24**ನೇ ಅಕ್ಟೋಬರ್ ಮಾಹೆ** 2025

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ**: 881/2022

**ಫಿರ್ಯಾದುದಾರರು** : **ಕರ್ನಾಟಕ ರಾಜ್ಯದ ಪರವಾಗಿ**
**ತೆರಕಣಾಂಬಿ ಪೊಲೀಸ್ ಠಾಣೆ**

[**ಪರವಾಗಿ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು]

**ವಿರುದ್ಧ**

**ಆರೋಪಿ** : **ಮಹದೇವಸ್ವಾಮಿ @ ಮಹೇಶ**
ಬಿನ್ ಲೇಟ್ ಶಾಂತಪ್ಪ
37 ವರ್ಷ ವಯಸ್ಸು
ವಾಸಃ ಯರಗನಹಳ್ಳಿ ಗ್ರಾಮ
ಚಾಮರಾಜನಗರ ತಾಲ್ಲೂಕು.

[**ಪರವಾಗಿಃ ಶ್ರೀ ಎಂ ಪಿ ಎಂ, ವಕೀಲರು**]

# ವಿ ವ ರ ಣಾ ಪ ಟ್ಟಿ

| | | |
|---|---|---|
| ಘಟನೆ ನಡೆದ ದಿನಾಂಕ | : | 17.05.2022 |
| ಘಟನೆ ದಾಖಲಾದ ದಿನಾಂಕ | : | 17.05.2022 |
| ಫಿರ್ಯಾದಿ ಹೆಸರು | : | ಎಂ ಮಂಜುನಾಥನಾಯಕ |
| ಆರೋಪಿಗಳ ವಿರುದ್ಧದ ಅಪರಾಧಗಳು | : | **ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34** |
| ವಿಚಾರಣೆ ಪ್ರಾರಂಭವಾದ ದಿನಾಂಕ | : | 10.07.2024 |
| ವಿಚಾರಣೆ ಮುಕ್ತಾಯವಾದ ದಿನಾಂಕ | : | 22.08.2025 |
| ತೀರ್ಪು ಪ್ರಕಟಿಸಿದ ದಿನಾಂಕ | : | 24.10.2025 |

**(ದೀಪು ಎಂ.ಟಿ )**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.**

## ತೀರ್ಪು

ತೆರಕಣಾಂಬಿ ಪೊಲೀಸ್ ಠಾಣೆಯ ಮುಖ್ಯ ಪೇದೆ-41 ರವರು ಆರೋಪಿಯ ವಿರುದ್ಧ **ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34** ರಡಿಯಲ್ಲಿ ಅಪರಾಧ ಎಸಗಿದ್ದಾರೆಂದು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ** :

ದಿನಾಂಕಃ 17.05.2022 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ತೆರಕಣಾಂಬಿ ಪೊಲೀಸ್ ಠಾಣಾ ಸರಹದ್ದಿನ ಯರಗನಹಳ್ಳಿ ಗ್ರಾಮದ ಸುವರ್ಣನಗರ

ಕ್ರಾಸ್ ಬಳಿ ಆರೋಪಿಯು ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೇ 90 ಎಂ.ಎಲ್ ಸಾಮರ್ಥ್ಯದ ಒಟ್ಟು 62 "ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ" ಎಂಬ ಹೆಸರಿನ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಇಟ್ಟುಕೊಂಡು ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದಾಗ ಅವುಗಳನ್ನು ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ. ಆದ್ದರಿಂದ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಕೃತ್ಯ ಎಸಗಿದ್ದಾರೆ ಎಂದು ಆರೋಪಿಸಿ ದೋಷಾರೋಪಣ ಪಟ್ಟಿ ಸಲ್ಲಿಸಿರುವುದು ಕಂಡುಬರುತ್ತದೆ.

**3.** ಆರೋಪಿಯ ವಿರುದ್ದ ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ, ಆರೋಪಣಾ ಸಂಜ್ಞೇಯವನ್ನು ತೆಗೆದುಕೊಳ್ಳಲಾಯಿತು. ಆರೋಪಿಯು ತಮ್ಮ ವಕೀಲರ ಮೂಲಕ ಹಾಜರಾಗಿದ್ದು ಆರೋಪಿಯನ್ನು ನ್ಯಾಯಾಲಯದ ಜಾಮೀನಿನ ಮೇಲೆ ಬಿಡಲಾಗಿರುತ್ತದೆ. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207ರ ಅಡಿಯಲ್ಲಿ ದೋಷಾರೋಪಣ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ ಆರೋಪಿಯ ವಿರುದ್ದ ದೋಷಾರೋಪಣೆಯನ್ನು ರಚಿಸಿ ಅವರಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿಯು ತಾನು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿರುತ್ತದೆ.

**4.** ಆರೋಪಿಯ ವಿರುದ್ದದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ಫ್ರಾಸಾ-1 ರಿಂದ 5 ರವರನ್ನು ವಿಚಾರಣೆ

ಮಾಡಿ ನಿಪಿ-1 ರಿಂದ 8 ದಾಖಲೆಗಳನ್ನು ನಿಶಾನೆಗಳಾಗಿ, ಮುದ್ದೆಮಾಲು.1 ಅನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ.

**5**. ಈ ಪ್ರಕರಣದ ವಿಚಾರಣೆ ಮುಗಿದ ನಂತರ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಅವರ ವಿರುದ್ಧದ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸಲಾಗಿ, ಆರೋಪಿಯು ಅಭಿಯೋಜನೆ ಸಾಕ್ಷ್ಯವನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ ಮತ್ತು ತಮ್ಮ ಪರವಾಗಿ ಯಾವುದೇ ಸಾಕ್ಷ್ಯ ಮಾಡಿಕೊಂಡಿರುವುದಿಲ್ಲ.

**6**. ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ.313ರ ಅಡಿಯಲ್ಲಿ ವಿಚಾರಣೆ ಮಾಡಿದ ನಂತರ ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

**7**. ಉಭಯ ಪಕ್ಷಗಳ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

**8.** ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆ :

## ಅಂಶಗಳು

**1.** ದಿನಾಂಕಃ 17.05.2022 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ತೆರಕಣಾಂಬಿ ಪೊಲೀಸ್ ಠಾಣಾ ಸರಹದ್ದಿನ ಯರಗನಹಳ್ಳಿ ಗ್ರಾಮದ ಸುವರ್ಣನಗರ ಕ್ರಾಸ್ ಬಳಿ

ಆರೋಪಿಯು ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೇ 90 ಎಂ.ಎಲ್ ಸಾಮರ್ಥ್ಯದ ಒಟ್ಟು 62 "ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ" ಎಂಬ ಹೆಸರಿನ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಇಟ್ಟುಕೊಂಡು ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದಾಗ ಅವುಗಳನ್ನು ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ. ಆದ್ದರಿಂದ ಆರೋಪಿಯು **ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸಿದೆಯೇ ?

**2.** ಏನು ಆದೇಶ ?

9. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆ :

ಅಂಶ 1 : **ನಕಾರಾತ್ಮಕವಾಗಿ**

ಅಂಶ 2 ಕ್ಕೆ : ಅಂತಿಮ ಆದೇಶದಂತೆ, ಈ ಕೆಳಕಂಡ :

## ಕಾ ರ ಣ ಗ ಳು

10. **ಅಂಶ ಸಂಖ್ಯೆ -1 ಕ್ಕೆ:** ಈ ಪ್ರಕರಣದಲ್ಲಿ ಆರೋಪಿಯು ದಿನಾಂಕಃ 17.05.2022 ರಂದು ಆರೋಪಿಯು ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೇ ಅಕ್ರಮವಾಗಿ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಸಾಗಾಣಿಕೆ ಮಾಡಿ ಸ್ವಾಧೀನ ಹೊಂದಿ ಸಾಗಾಣಿಕೆ ಮಾಡುತ್ತಿದ್ದಾಗ ಚಾಸಾ-1

ರವರು ಸಿಬ್ಬಂದಿಗಳೊಡನೆ ದಾಳಿ ಮಾಡಿ ಆರೋಪಿಯಿಂದ 90 ಎಂ.ಎಲ್ ಸಾಮರ್ಥ್ಯದ ಒಟ್ಟು 62 "ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ" ಎಂಬ ಹೆಸರಿನ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಅಮಾನತ್ತು ಪಡಿಸಿಕೊಂಡಿದ್ದು, ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಆರೋಪಿಸಿ ದೋಷಾರೋಪಣಾ ಪತ್ರ ಸಲ್ಲಿಸಲಾಗಿರುತ್ತದೆ. ಈ ಪ್ರಕರಣವನ್ನು ಸಾಬೀತು ಪಡಿಸುವ ಸಲುವಾಗಿ ಅಭಿಯೋಜನೆಯವರು ಚಾಸಾ–2 ರವರನ್ನು ಪ್ರಾಸಾ–1 ಎಂದು, ಚಾಸಾ–3 ರವರನ್ನು ಪ್ರಾಸಾ–2 ಎಂದು, ಚಾಸಾ–4 ರವರನ್ನು ಪ್ರಾಸಾ–3 ಎಂದು, ಚಾಸಾ–10 ರವರನ್ನು ಪ್ರಾಸಾ–4 ಎಂದು ಹಾಗೂ ಚಾಸಾ–1 ರವರನ್ನು ಪ್ರಾಸಾ–5 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ಸದರಿ ಸಾಕ್ಷಿಗಳ ಮೂಲಕ ನಿಪಿ–1 ರಿಂದ 8 ರಂತೆ ದಾಖಲೆಗಳನ್ನು ನಿಪಿ – 1 ಅಮಾನತ್ತು ಮಹಜರ್, ನಿಪಿ–1(ಎ) ಯಿಂದ (ಇ) ಸಾಕ್ಷಿದಾರರ ಸಹಿಗಳು, ನಿಪಿ–2 ಮತ್ತು 3 ಸಾಕ್ಷಿದಾರರ ಹೇಳಿಕೆಗಳು, ನಿಪಿ–4 ವರದಿ, ನಿಪಿ–4(ಎ) ಮತ್ತು (ಬಿ) ಸಾಕ್ಷಿದಾರರ ಸಹಿಗಳು, ನಿಪಿ–5 ಪ್ರಥಮ ವರ್ತಮಾನ ವರದಿ, ನಿಪಿ–5(ಎ) ಸಾಕ್ಷಿದಾರರ ಸಹಿ, ನಿಪಿ–6 ಎಫ್ ಎಸ್ ಎಲ್ ವರದಿ, ನಿಪಿ–6(ಎ) ಸಾಕ್ಷಿದಾರರ ಸಹಿ, ನಿಪಿ–7 ಪತ್ರ, ನಿಪಿ–7(ಎ) ಸಾಕ್ಷಿದಾರರ ಸಹಿ, ನಿಪಿ–8 ಜ್ಞಾಪನ ಪತ್ರ, ನಿಪಿ – 8(ಎ) ಸಾಕ್ಷಿದಾರರ ಸಹಿ ಹಾಗೂ ಮುದ್ದೆ ಮಾಲು–1 ನಾಲ್ಕು ಮದ್ಯದ ಪೌಚ್ ಗಳನ್ನು ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುತ್ತಾರೆ.

**11.** ಈ ಪ್ರಕರಣದಲ್ಲಿ ದಾಳಿ ಕೈಗೊಂಡ ಪ್ರಾಸಾ–5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 17.05.2022 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಬೊಮ್ಮನಹಳ್ಳಿ, ರಾಮಯ್ಯನಪುರ ಮತ್ತು ಯರಗನಹಳ್ಳಿ ಕಡೆ ಚಾಸಾ–4

ರಿಂದ 6 ರವರೊಂದಿಗ ಗಸ್ತು ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು, ಯಾರೋ ಆಸಾಮಿ ರಾಮಯ್ಯನಪುರ ಕಡೆಯಿಂದ ಯರಗನಹಳ್ಳಿ ಕಡೆಗೆ ಅಕ್ರಮ ಮದ್ಯವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಕೊಂಡು ನಡೆದುಕೊಂಡು ಸಾಗಿಸುತ್ತಿರುವುದಾಗಿ ಬಂದ ಬಾತ್ಮಿಯನ್ನು ತಾನು ಚಾಸಾ–4 ರಿಂದ 6 ರವರಿಗೆ ತಿಳಿಸಿ, ಮಧ್ಯಾಹ್ನ 1.10 ಗಂಟೆ ಸಮಯಕ್ಕೆ ಚಾಸಾ–2 ಮತ್ತು 3 ರವರಿಗೆ ಪಂಚನಾಮೆ ಸಾಕ್ಷಿಗಳಾಗಿ ಸಹಕರಿಸುವಂತೆ ಕೋರಿದ್ದು ಅವರು ಒಪ್ಪಿದ ಮೇರೆಗೆ ಅವರನ್ನು ಮತ್ತು ಸಿಬ್ಬಂದಿಗಳಾದ ಚಾಸಾ 4 ರಿಂದ 6 ರವರನ್ನು ಕರೆದುಕೊಂಡು ಯರಗನಹಳ್ಳಿಯ ಸುವರ್ಣ ನಗರ ಕ್ರಾಸ್ ನಲ್ಲಿ ಕಾಯುತ್ತಿದ್ದಾಗ ಮಧ್ಯಾಹ್ನ 1.30 ಸಮಯದಲ್ಲಿ ಒಬ್ಬ ಆಸಾಮಿ ಪ್ಲಾಸ್ಟಿಕ್ ಚೀಲ ಹೊತ್ತುಕೊಂಡು ನಡೆದುಕೊಂಡು ಬರುತ್ತಿದ್ದು ತಮ್ಮನ್ನು ನೋಡಿ ಓಡಲು ಪ್ರಾರಂಭಿಸಿದ್ದು, ತಮ್ಮ ಸಿಬ್ಬಂದಿಗಳು ಅವನನ್ನು ಸುತ್ತುವರೆದು ಹಿಡಿದು ವಿಚಾರಿಸಲಾಗಿ ಆತನ ಹೆಸರು ಮಹದೇವಸ್ವಾಮಿ, ಯರಗನಹಳ್ಳಿ ಗ್ರಾಮ ಎಂದು ತಿಳಿಸಿದ್ದು, ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂಎಲ್ ನ 60 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕ್ ಗಳು ಇದ್ದು, ಅವುಗಳ ಬಗ್ಗೆ ವಿಚಾರಿಸಲಾಗಿ ಆರೋಪಿಯು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ಮಧ್ಯಾಹ್ನ 1.45 ರಿಂದ 2.45 ರ ವರೆಗೆ ಪಂಚರ ಸಮಕ್ಷಮ ನಿಪಿ–1 ರಂತೆ ಪಂಚನಾಮೆ ಕ್ರಮ ಜರುಗಿಸಿ ಮದ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡು 4 ಟೆಟ್ರಾ ಪ್ಯಾಕ್ ಗಳನ್ನು ಪ್ರತ್ಯೇಕಿಸಿ ರಾಸಾಯನಿಕ ವಿಶ್ಲೇಷಣೆಗಾಗಿ ಸಿಲ್ ಮಾಡಿ ಸಾಕ್ಷಿಗಳ ಸಹಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ಮುದ್ದೆ ಮಾಲು–1 ಮದ್ಯದ 4 ಖಾಲಿ ಪೌಚ್ ಗಳನ್ನು ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ತಮ್ಮ

ಪಾಟೀ ಸವಾಲಿನಲ್ಲಿ ಬಾತ್ಮಿಯು ತನಗೆ ಫೋನ್ ಮೂಲಕ ಬಂದಿರುತ್ತದೆ. ಬಾತ್ಮಿದಾರರು ಆರೋಪಿಯ ಚಹರೆಯ ಬಗ್ಗೆ ತಿಳಿಸಿರಲಿಲ್ಲ. ತಮಗೆ ಬಾತ್ಮಿ ಬಂದಾಗ ನಾವು ಯರಗನಹಳ್ಳಿ ಗ್ರಾಮದಲ್ಲಿ ಇದ್ದೆವು. ಪ್ಲಾಸ್ಟಿಕ್ ಚೀಲವನ್ನು ಹಳ್ಳಿಗಳಲ್ಲಿ ಗೊಬ್ಬರ ಮತ್ತು ಇತರೆ ವಸ್ತುಗಳನ್ನು ತೆಗೆದುಕೊಂಡು ಹೋಗಲು ಉಪಯೋಗಿಸುತ್ತಾರೆ ಎಂದರೆ ಸರಿ. ಪಂಚನಾಮೆ ಸಾಕ್ಷಿಗಳಿಗೆ ಲಿಖಿತ ನೋಟೀಸ್ ನೀಡಿಲ್ಲ ಮೌಖಿಕವಾಗಿ ತಿಳಿಸಿದ್ದೆ. ಕೃತ್ಯ ಸ್ಥಳದಲ್ಲಿ ಯಾವುದೇ ಫೋಟೋ ತೆಗೆದಿಲ್ಲ. ಆರೋಪಿಯನ್ನು ತಾವೆಲ್ಲರೂ ಒಟ್ಟಿಗೆ ಸೇರಿ ಹಿಡಿದಿರುತ್ತೇವೆ. ಮದ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಳ್ಳುವಾಗ ಯಾವುದೇ ಫೋಟೋಗಳನ್ನು ತೆಗೆದಿರಲಿಲ್ಲ. ಆರೋಪಿಯು ಯಾವ ಮದ್ಯದ ಅಂಗಡಿಯಿಂದ ಮದ್ಯ ಖರೀದಿಸಿರುವುದಾಗಿ ತಿಳಿಸಿರುವುದಿಲ್ಲ. ಮದ್ಯದ ಪೌಚ್ ಗಳ ಮೇಲೆ ಪ್ರತ್ಯೇಕ ಬ್ಯಾಚ್ ನಂಬರ್ ಮತ್ತು ಸಿರಿಯಲ್ ನಂಬರ್ ನಮೂದಿಸಿರುತ್ತದೆ ಎಂದರೆ ಸರಿ. ನಿಪಿ-4 ವರದಿ ದೂರಿನಲ್ಲಿ ಬ್ಯಾಚ್ ನಂಬರ್ ತಿಳಿಸಿದ್ದೇನೆ ಮತ್ತು ಸಿರಿಯಲ್ ನಂಬರ್ ತಿಳಿಸಿರುವುದಿಲ್ಲ. ತಾವು ಯಾವುದೇ ದಾಳಿ ಮಾಡಿ ಆರೋಪಿಯನ್ನು ಮತ್ತು ಮುದ್ದೆ ಮಾಲುಗಳನ್ನು ಹಾಗೂ ಇತರೆ ಮದ್ಯವಾನ್ನು ಪಂಚನಾಮೆ ಜರುಗಿಸಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣವನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**12.** ಈ ಪ್ರಕರಣದಲ್ಲಿ ಫ್ರಾಸಾ-5 ರವರೊಂದಿಗೆ ದಾಳಿಯಲ್ಲಿ ಭಾಗಿಯಾಗಿದ್ದ ಫ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಫ್ರಾಸಾ-5 ರವರ ಸಾಕ್ಷ್ಯವನ್ನೇ

ಪುನರುಚ್ಚರಿಸಿರುತ್ತಾರೆ. ಸದರಿ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ತಮ್ಮ ಪಾಟೀಸವಾಲಿನಲ್ಲಿ ಆರೋಪಿಯನ್ನು ಹಿಡಿದಿಲ್ಲ, ತಾವು ಯಾವುದೇ ದಾಳಿ ಮಾಡಿಲ್ಲ, ಯಾವುದೇ ಮುದ್ದೆ ಮಾಲುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಈ ಪ್ರಕರಣದಲ್ಲಿ ಪಂಚನಾಮೆ ಸಾಕ್ಷಿಗಳಾದ ಪ್ರಾಸಾ–1 ಮತ್ತು ಪ್ರಾಸಾ–2 ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ–1 ಪಂಚನಾಮೆಯಲ್ಲಿರುವ ತಮ್ಮ ಸಹಿಗಳಾದ ನಿಪಿ–1(ಎ) ಮತ್ತು ನಿಪಿ–1(ಬಿ) ಎಂದು ಗುರುತಿಸಿಕೊಂಡಿದ್ದು, ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ, ನಿಪಿ–1 ಕ್ಕೆ ಎಲ್ಲಿ ಯಾವಾಗ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನಿಪಿ–1 ರಲ್ಲಿ ಏನು ಬರವಣಿಗೆ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ತನ್ನ ಸಮಕ್ಷಮ ಯಾವುದೇ ಮದ್ಯದ ಪ್ಯಾಕೆಟ್ ಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ತಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಗಳನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿ ನಿಪಿ–1 ಪಂಚನಾಮೆ ಹಾಗೂ ಪ್ರಾಸಾ–1 ಮತ್ತು 2 ರವರು ನೀಡಿದ್ದಾರೆ ಎನ್ನಲಾದ ನಿಪಿ–2 ಮತ್ತು 3 ಹೇಳಿಕೆಗಳ ಸಂಪೂರ್ಣ ಅಂಶಗಳನ್ನು ಓದಿ ಹೇಳಿ ಕೇಳಿದ್ದಾಗಿಯೂ ಸಹ ಅಭಿಯೋಜನೆಗೆ ಪೂರಕವಾದ ಯಾವುದೇ ಒಪ್ಪಿಗೆಗಳನ್ನು ಪಡೆಯುವವಲ್ಲಿ ವಿಫಲರಾಗಿರುತ್ತಾರೆ.

**14.** ಈ ಪ್ರಕರಣದಲ್ಲಿ ತನಿಖಾಧಿಕಾರಿಯಾದ ಪ್ರಾಸಾ–4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 17.05.2022 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ

ಮಧ್ಯಾಹ್ನ 4.00 ಗಂಟೆ ಸಮಯದಲ್ಲಿ ಚಾಸಾ–1 ಠಾಣೆಗೆ ಹಾಜರಾಗಿ ನೀಡಿದ ವರದಿ, ಸ್ಥಳ ಪಂಚನಾಮೆ ಹಾಗೂ ಆರೋಪಿ ಮತ್ತು ಮಾಲುಗಳನ್ನು ಹಾಜರುಪಡಿಸಿದ್ದನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿ ಪ್ರ.ವ.ವ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮುದ್ದೆ ಮಾಲುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ಆರೋಪಿಗೆ ದಂಡ ಪ್ರಕ್ರೀಯ ಸಂಹಿತೆ 41ಎ ಅಡಿಯಲ್ಲಿ ನೋಟೀಸ್ ನೀಡಿ ಬಿಟ್ಟಿರುತ್ತೇನೆ. ಚಾಸಾ–2 ರಿಂದ 6 ರವರ ಹೇಳಿಕೆ ದಾಖಲಿಸಿರುತ್ತೇನೆ. 4 ಮಾದರಿ ಮದ್ಯದ ಪೌಚ್ ಗಳನ್ನು ಚಾಸಾ–7 ರವರ ಮೂಲಕ ರಾಸಾಯನಿಕ ವಿಶ್ಲೇಷಣಾ ವರದಿ ಕೋರಿ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟು, ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಉಳಿದ 56 ಮದ್ಯದ ಪೌಚ್ ಗಳನ್ನು ಅಬಕಾರಿ ನಿರೀಕ್ಷಕರು ಗುಂಡ್ಲುಪೇಟೆ ರವರಿಗೆ ಚಾಸಾ–8 ರವರ ಮೂಲಕ ಹಸ್ತಾಂತರಿಸಿರುತ್ತೇನೆ. ನಂತರ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಮೇರೆಗೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸಾಕ್ಷಿಯು ಆರೋಪಿ ಮತ್ತು ಮುದ್ದೆ ಮಾಲನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಆರೋಪಿ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು ತಮ್ಮ ಪಾಟೀಸವಾಲಿನಲ್ಲಿ ಚಾಸಾ–1 ರವರು ಆರೋಪಿ, ಮುದ್ದೆ ಮಾಲು ಮತ್ತು ಪಂಚನಾಮೆಯನ್ನು ತಮ್ಮ ಮುಂದೆ ಹಾಜರುಪಡಿಸದಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–2 ರಿಂದ 6 ರವರ ಹೇಳಿಕೆ ದಾಖಲಿಸಿಲ್ಲ ಎಂದರೆ ಸರಿಯಲ್ಲ. ಎಲ್ಲ ಮದ್ಯದ ಪೌಚ್ ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿಕೊಡಲು ತೊಂದರೆ ಇರಲಿಲ್ಲ. ಉಳಿದ ಮದ್ಯದ ಪೌಚ್ ಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಮತ್ತು ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**15.** ಈ ಮೇಲ್ಕಂಡಂತೆ ಅಭಿಯೋಜನೆಯವರು ಹಾಜರುಪಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳು, ಕಾನೂನು ಪರಿಕಲ್ಪನೆಗಳು ಹಾಗೂ ಆರೋಪಿಗಳು ತೆಗೆದುಕೊಂಡಿರುವ ಪ್ರತಿರಕ್ಷಣೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಈ ಪ್ರಕರಣದಲ್ಲಿ ಆರೋಪಿಯು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡಿ ದಾಸ್ತಾನು ಹೊಂದಿ ಮಾರಾಟ ಮಾಡುತ್ತಿದ್ದಾಗ ಆರೋಪಿಯಿಂದ ಅವುಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ಮತ್ತು ಅವುಗಳಲ್ಲಿ ಮದ್ಯದ ಅಂಶವಿತ್ತು. ಹಾಗಾಗಿ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಆರೋಪಿಸಲಾಗಿರುತ್ತದೆ. ಈ ಕುರಿತಂತೆ ಅಭಿಯೋಜನೆ ಹಾಜರು ಪಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ವಿಮರ್ಶಿಸಿ ನೋಡಿದಾಗ ದೂರುದಾರರು ಮತ್ತು ದಾಳಿ ಕೈಗೊಂಡ ಫ್ರಾಸಾ–5 ರವರು ಫ್ರಾಸಾ–3 ಹಾಗೂ ಪಂಚನಾಮೆ ಸಾಕ್ಷಿಗಳಾದ ಫ್ರಾಸಾ–1 ಮತ್ತು 2 ರವರೊಂದಿಗೆ ದಾಳಿ ಮಾಡಿ ಆರೋಪಿಯಿಂದ ಮುದ್ದೆ ಮಾಲು–1 ಹಾಗೂ ಇತರ ಮದ್ಯದ ಪೌಚ್ ಗಳನ್ನು ನಿಪಿ–1 ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಳ್ಳಲಾಗಿದೆ ಹಾಗೂ ಆರೋಪಿಯು ಸದರಿ ಮದ್ಯವನ್ನು ಹೊಂದಿರಲು ಯಾವುದೇ ರಹದಾರಿ ಇಲ್ಲವೆಂದು ತಿಳಿಸಿರುತ್ತಾರೆ. ಹಾಗಾಗಿ ಆರೋಪಿಯನ್ನು ಮುದ್ದೆ ಮಾಲುಗಳು ಮತ್ತು ಇತರ ಮದ್ಯವನ್ನು ವಶಕ್ಕೆ ಪಡೆದು ನಿಪಿ–1 ಪಂಚನಾಮೆಯೊಂದಿಗೆ ಠಾಣಾಧಿಕಾರಿಗಳ ಮುಂದೆ

ಹಾಜರು ಪಡಿಸಿರುವುದಾಗಿ ಫ್ರಾಸಾ–5 ರವರು ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಅದಕ್ಕೆ ಪೂರಕವಾಗಿ ಫ್ರಾಸಾ–3 ರವರು ಸಹ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಸದರಿ ಸಾಕ್ಷಿಗಳನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದ್ದು, ತಮ್ಮ ಪಾಟೀಸವಾಲಿನಲ್ಲಿ ಆರೋಪಿಯಿಂದ ಯಾವುದೇ ಮುದ್ದೆ ಮಾಲುಗಳನ್ನು ಮತ್ತು ಇತರ ಮದ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಹಾಗೂ ಸ್ಥಳದಲ್ಲಿ ಯಾವುದೇ ಪಂಚನಾಮೆ ಕ್ರಮ ಜರುಗಿಸಿಲ್ಲ ಎಂದು ಸೂಚಿಸಿರುವ ಪ್ರಶ್ನೆಗಳಿಗೆ ಸರಿಯಲ್ಲ ಎಂದು ಉತ್ತರಿಸಿರುವುದು ಕಂಡುಬರುತ್ತದೆ. ಹಾಗಾಗಿ ಪಂಚನಾಮೆ ಸಾಕ್ಷಿಗಳಾದ ಫ್ರಾಸಾ–1 ಮತ್ತು 2 ರವರ ಸಾಕ್ಷ್ಯವನ್ನು ಈ ಹಂತದಲ್ಲಿ ಪರಿಶೀಲಿಸುವುದು ಅಗತ್ಯವಾಗಿರುತ್ತದೆ. ಫ್ರಾಸಾ–1 ಮತ್ತು 2 ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ–1 ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ಹೊರತು ಪಡಿಸಿ ಅದರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ, ಪೊಲೀಸರು ತಮ್ಮ ಸಮಕ್ಷಮ ಯಾವುದೇ ಮದ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ, ಹೇಳಿಕೆಯನ್ನು ಪಡೆದುಕೊಂಡಿಲ್ಲ ಹಾಗೂ ಆರೋಪಿಯನ್ನು ತಾವು ಈ ಹಿಂದೆ ನೋಡಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಫ್ರಾಸಾ–3 ಹಾಗೂ 5 ರವರ ಸಾಕ್ಷ್ಯಕ್ಕೂ ಫ್ರಾಸಾ–1 ಮತ್ತು 2 ರವರ ಸಾಕ್ಷ್ಯವು ಒಂದಕ್ಕೊಂದು ವ್ಯತಿರಿಕ್ತವಾಗಿರುವುದು ಕಂಡುಬರುತ್ತದೆ. ಅಭಿಯೋಜನೆಯ ಪ್ರಕರಣದಂತೆ ಫ್ರಾಸಾ– 3 ಹಾಗೂ 5 ರವರು ಫ್ರಾಸಾ–1 ಮತ್ತು 2 ರವರ ಸಮಕ್ಷಮ ಆರೋಪಿಯಿಂದ ಮುದ್ದೆ ಮಾಲು–1 ಮತ್ತು ಇತರ ಮದ್ಯವನ್ನು ನಿಪಿ–1 ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂಬುದಾಗಿರುತ್ತದೆ. ಆದರೆ ಸ್ವತಂತ್ರ ಪಂಚನಾಮೆ ಸಾಕ್ಷಿಗಳಾದ ಫ್ರಾಸಾ–1 ಮತ್ತು 2 ರವರು ಆರೋಪಿಯನ್ನು ತಾವು ಈ ಹಿಂದೆ ನೋಡಿಲ್ಲವೆಂದು ಹಾಗೂ

ಮುದ್ದೆಮಾಲುಗಳನ್ನು ತಮ್ಮ ಸಮಕ್ಷಮ ವಶಕ್ಕೆ ಪಡೆದುಕೊಂಡಿಲ್ಲವೆಂದು ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಹಾಗಾಗಿ ಫ್ರಾಸಾ–1 ಮತ್ತು 2 ರವರು ನಿಪಿ–1 ಪಂಚನಾಮೆಗೆ ಹಾಗೂ ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಆದ್ದರಿಂದ ಫ್ರಾಸಾ– 3 ಹಾಗೂ 5 ರವರು ಫ್ರಾಸಾ–1 ಮತ್ತು 2 ರವರ ಸಮಕ್ಷಮ ಆರೋಪಿಯಿಂದ ಮುದ್ದೆ ಮಾಲು–1 ಹಾಗೂ ಇತರ ಮದ್ಯದ ಪೌಚ್ ಗಳನ್ನು ನಿಪಿ–1 ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಂಡಿದ್ದಾರೆ ಎಂಬ ಅಂಶವು ಸಂಶಯಕ್ಕೆ ಎಡೆಮಾಡಿಕೊಡುತ್ತದೆ.

**16.** ಯಾವುದೇ ಅಪರಾಧಿಕ ಪ್ರಕರಣಗಳಲ್ಲಿ ಆರೋಪಿಯ ಮೇಲಿನ ಆರೋಪವನ್ನು ನಿಸ್ಸಂಶಯವಾಗಿ ಸಾಬೀತು ಪಡಿಸುವ ಹೊಣೆಗಾರಿಕೆ ಅಭಿಯೋಜನೆ ಮೇಲಿರುತ್ತದೆ. ಫ್ರಾಸಾ–3 ಹಾಗೂ 5 ರವರು ಆರೋಪಿಯಿಂದ ಮುದ್ದೆ ಮಾಲು–1 ಮತ್ತು ಇತರ ಮದ್ಯವನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂದು ಸಾಕ್ಷ್ಯ ನುಡಿದಿದ್ದರೂ ಸಹ ಸ್ವತಂತ್ರ ಪಂಚನಾಮೆ ಸಾಕ್ಷಿಗಳು ನಿಪಿ–1 ಪಂಚನಾಮೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದರಿಂದ ಆರೋಪಿಯ ವಶದಿಂದಲೇ ಮುದ್ದೆ ಮಾಲು–1 ಮತ್ತು ಇತರ ಮದ್ಯವನ್ನು ನಿಪಿ–1 ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂಬ ಅಂಶವನ್ನು ಸಾಬೀತು ಪಡಿಸಲು ಅಭಿಯೋಜನೆ ವಿಫಲವಾಗಿರುತ್ತದೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಅಭಿಯೋಜನೆಯ ಪ್ರಕರಣದಂತೆ ವಶಪಡಿಸಿಕೊಂಡ ಮದ್ಯದ ಪೌಚ್ ಗಳ ಪೈಕಿ ಕೇವಲ 90 ಎಂ.ಎಲ್ ನ 4 ಮದ್ಯದ ಪೌಚ್ ಅನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿರುವುದಾಗಿ ತನಿಖಾಧಿಕಾರಿಗಳು ಮತ್ತು ವಿಧಿ ವಿಜ್ಞಾನ ಪ್ರಯೋಗಾಲಯದವರು ವರದಿ ನೀಡಿರುವುದು ಕಂಡುಬರುತ್ತದೆ. ಈ ಪ್ರಕರಣದಲ್ಲಿ 90 ಎಂ.ಎಲ್ ನ 62 ಮದ್ಯದ ಪೌಚ್ ಗಳನ್ನು

ವಶಪಡಿಸಿಕೊಂಡಿದ್ದೇವೆಂದು ಹೇಳಿದ್ದು, ಕೇವಲ 4 ಮದ್ಯದ ಪೌಚ್ ಅನ್ನು ಮಾತ್ರ ರಾಸಾಯನಿಕ ವಿಶ್ಲೇಷಣೆ ವರದಿ ಕೋರಿ ಸಲ್ಲಿಸಿದ್ದು, ನಿಪಿ–6 ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪರಿಶೀಲಿಸಿದಾಗ 90 ಎಂ.ಎಲ್ ನ 4 ಮದ್ಯದ ಪೌಚ್ ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಮದ್ಯದ ಅಂಶವಿತ್ತು ಎಂದು ವರದಿ ನೀಡಿರುವುದು ಕಂಡುಬರುತ್ತದೆ. ಹಾಗಾಗಿ ಒಟ್ಟು 360 ಎಂ.ಎಲ್ ಅನ್ನು ಮಾತ್ರ ರಾಸಾಯನಿಕ ವಿಶ್ಲೇಷಣೆ ವರದಿಗಾಗಿ ಕಳುಹಿಸಿಕೊಟ್ಟಿರುವುದು ಕಂಡುಬರುತ್ತದೆ. ಹಾಗಾಗಿ ಕಾನೂನು ನಿಗಧಿ ಪಡಿಸಿದ್ದಕ್ಕಿಂತ ಹೆಚ್ಚಿನ ಮಟ್ಟದ ಮದ್ಯವನ್ನು ಆರೋಪಿಯು ಸ್ವಾಧೀನ ಹೊಂದಿದ್ದರು ಮತ್ತು ಅವುಗಳನ್ನು ಅಮಾನತ್ತು ಪಡಿಸಿಕೊಂಡಿದ್ದು, ಅವುಗಳಲ್ಲಿ ಮದ್ಯದ ಅಂಶವಿತ್ತು ಎಂಬ ಅಂಶವನ್ನು ಸಾಬೀತು ಪಡಿಸಲು ಅಭಿಯೋಜನೆಯು ಕಾನೂನು ನಿಗಧಿ ಪಡಿಸಿದ್ದಕ್ಕಿಂತ ಹೆಚ್ಚಿನ ಮಟ್ಟದ ಮದ್ಯವನ್ನು ರಾಸಾಯನಿಕ ವಿಶ್ಲೇಷಣಾ ವರದಿಗೆ ಕಳುಹಿಸಿಕೊಟ್ಟು, ವರದಿ ಪಡೆಯದೇ ಇರುವುದು ಸಹ ಅಭಿಯೋಜನೆ ಪ್ರಕರಣಕ್ಕೆ ಹಿನ್ನಡೆಯನ್ನುಂಟು ಮಾಡಿರುತ್ತದೆ. ಈ ಹಂತದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ 1977 (2) ಕೆ.ಎಲ್.ಜೆ 463 ಯನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಸದರಿ ಪ್ರಕರಣವಾದ ಮಹಾಪುರುಷ ದುರ್ಗ ಜೋಗಲೇಕರ್ ವಿರುದ್ಧ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ತಿಳಿಸಿರುತ್ತದೆ.

> “Though the raiding parties have seized two hand bags one containing six brandy bottles with labels and other containing three bottles of coconut fenny with labels

without any permit and of another brandy bottle canceled in his waist under the panchanama ExP1, but had sent only one bottle to the chemical examiner for getting report. Observing the facts of the case, the Hon'ble High Court has observed that "Granting that all those ten bottles were recovered from the possession of the accused at the time and place alleged by the prosecution there is no legal evidence to show that each of those bottles contained brandy as alleged. It is undisputed that the contents of only one of those bottles were sent to the chemical examiner for analysis and it is not known why the contents of other nine bottles were not sent to him. Merely because those bottles those labels, it is difficult to come to the conclusion and hold that they contained brandy or some other intoxicant. It is incumbent on the prosecution to place convincing and cogent evidence on record to show that those bottles also contained

> brandy or other intoxicant. Solely relying upon the labels, it is hazardous to hold that what was contained in those nine bottles was either brandy or some other intoxicants.

**17.** ಈ ಪ್ರಸ್ತುತ ಪ್ರಕರಣದ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ತನಿಖಾಧಿಕಾರಿಯು ಎಲ್ಲಾ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುವುದಿಲ್ಲ ಮತ್ತು ಮುದ್ದೆ ಮಾಲು-1 ಅನ್ನು ಮಾತ್ರ ಕಳುಹಿಸಿರುವುದು ಕಂಡುಬರುತ್ತದೆ. ಆದರೆ ಅಕ್ರಮ ಮದ್ಯವನ್ನು ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದೆ ಎಂಬುದರ ಕುರಿತಾಗಿ ಇಲಾಖಾ ಸಾಕ್ಷಿಗಳನ್ನು ಹೊರತುಪಡಿಸಿ ಬೇರೆ ಸಾಕ್ಷಿಗಳು ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದೆ ಎನ್ನಲಾದ ಎಲ್ಲಾ ಮದ್ಯವನ್ನು ಅಥವಾ ಕಾನೂನು ನಿಗಧಿಪಡಿಸಿದಕ್ಕಿಂತ ಹೆಚ್ಚಿನ ಪ್ರಮಾಣದ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡದ ಕಾರಣ ಅಭಿಯೋಜನೆಯವರು ಆರೋಪಿಸಿರುವಂತೆ ಆರೋಪಿಯು ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡಿ ಸ್ವಾಧೀನ ಹೊಂದಿದ್ದು ಮಾರಾಟ ಮಾಡುತ್ತಿದ್ದರು ಹಾಗೂ ಅವುಗಳನ್ನು ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದೆ ಎಂಬ ಅಂಶವನ್ನು ಸಾಬೀತುಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುವುದು ಕಂಡುಬರುತ್ತದೆ. ಹಾಗಾಗಿ ಮೇಲ್ಕಂಡ ತೀರ್ಪುಜನ್ಯವು ಈ ಪ್ರಸ್ತುತ ಪ್ರಕರಣದ ವಸ್ತುಸ್ಥಿತಿಗೆ ಸೂಕ್ತವಾಗಿ ಅನ್ವಯಿಸುತ್ತದೆ. ಆದುದರಿಂದ ಅಭಿಯೋಜನೆಯ ಪ್ರಕರಣವು ಸಂಶಯಕ್ಕೆ ಎಡೆಮಾಡಿಕೊಡುತ್ತದೆ.

18. ಯಾವುದೇ ಒಂದು ಅಪರಾಧಿಕ ಪ್ರಕರಣದಲ್ಲಿ ಆರೋಪಿಯ ಮೇಲಿನ ಅಪರಾಧಗಳನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವ ಹೊಣೆಗಾರಿಕೆ ಅಭಿಯೋಜನೆ ಮೇಲಿರುತ್ತದೆ. ಅಭಿಯೋಜನೆಯು ಆರೋಪಿಯು ಕಾನೂನು ಬಾಹೀರವಾಗಿ ಯಾವುದೇ ಪರವಾನಿಗೆ ಇಲ್ಲದೆ ಮಧ್ಯವನ್ನು ಅಕ್ರಮವಾಗಿ ಸಾಗಾಟ ಮಾಡಿ ಸ್ವಾಧೀನ ಹೊಂದಿ ಮಾರಾಟ ಮಾಡುತ್ತಿದ್ದರು ಎಂದು ಆರೋಪಿಸಿರುವುದು ಕಂಡುಬರುತ್ತದೆ. ಆದರೆ ಆರೋಪಿಯೇ ಆ ದಿನ ಮುದ್ದೆಮಾಲುಗಳು ಹಾಗೂ ಇತರೆ ಮಧ್ಯವನ್ನು ತಮ್ಮ ಸ್ವಾಧೀನ ಹೊಂದಿದ್ದರು ಎಂಬುದರ ಕುರಿತಾಗಿ ಯಾವುದೇ ಪ್ರತ್ಯಕ್ಷ ಸಾಕ್ಷಿಯನ್ನು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಿರುವುದಿಲ್ಲ. ಆದ್ದರಿಂದ ಇಲಾಖಾ ಸಾಕ್ಷಿಗಳನ್ನು ಹೊರತುಪಡಿಸಿ ಇತರೆ ಯಾವುದೇ ಸಾಕ್ಷಿಗಳು ಅಭಿಯೋಜನೆಯ ಪ್ರಕರಣವನ್ನು ಪುಷ್ಠೀಕರಿಸಿ ಸಾಕ್ಷ್ಯ ನುಡಿದಿರುವುದಿಲ್ಲ. ಆರೋಪಿಯನ್ನು ಮುದ್ದೆಮಾಲು- 1 ಹಾಗೂ ಇತರೆ ಮಧ್ಯವನ್ನು ನಿಪಿ.1 ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂಬುದರ ಬಗ್ಗೆ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಹಾಗಾಗಿ ಇಲಾಖಾ ಸಾಕ್ಷಿಗಳನ್ನು ಹೊರತುಪಡಿಸಿ ಇತರೆ ಯಾವುದೇ ಸಾಕ್ಷಿಗಳು ಅಭಿಯೋಜನೆಯ ಪ್ರಕರಣಗಳನ್ನು ಪುಷ್ಠೀಕರಿಸದೇ ಇರುವುದರಿಂದ ಅಭಿಯೋಜನೆಯ ಪ್ರಕರಣವು ಸಂಶಯಕ್ಕೆ ಎಡೆಮಾಡಿ ಕೊಡುತ್ತದೆ.

19. ಅಪರಾಧಿಕ ಪ್ರಕರಣಗಳಲ್ಲಿ ಹೊಣೆಗಾರಿಕೆಯನ್ನು ಸಾಬೀತು ಪಡಿಸುವಂತಹ ಪರಿಕಲ್ಪನೆ ಸಂಶಯಾತೀತಾವಾಗಿರುತ್ತದೆ. ಹಾಗಾಗಿ ಯಾವುದೇ ಒಂದು ಅಪರಾಧಿಕ ಕೃತ್ಯದ ಕುರಿತು ಅಪಾಧಿತನ ವಿರುದ್ಧ ದೋಷಾರೋಪಣೆಯನ್ನು ಯಾವುದೇ ಸಂಶಯಗಳಿಗೆ ಎಡೆಮಾಡಿಕೊಡದಂತೆ ರುಜುವಾತುಪಡಿಸಬೇಕಾಗುತ್ತದೆ.

ಆದರೆ ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿದಾಗ ಆರೋಪಿಯಿಂದ ಮದ್ಯದ ಪೌಚುಗಳನ್ನು ಅಮಾನತ್ತುಪಡಿಸಿಕೊಂಡ ಕುರಿತು ಹಾಗೂ ಸದರಿ ಮದ್ಯದ ಪೌಚುಗಳು ಆರೋಪಿಗೆ ಸಂಬಂಧಪಟ್ಟಿದ್ದು ಎಂಬುವುದನ್ನು ಸಂಶಯಾತೀತಾವಾಗಿ ರುಜುವಾತುಪಡಿಸಲು ಅಭಿಯೋಜನೆ ವಿಫಲವಾಗಿರುತ್ತದೆ.

**20.** ಕರ್ನಾಟಕ ಸರ್ಕಾರದ ಅಧಿಸೂಚನೆಯ ಸಂಖ್ಯೆ ಎಫ್ ಡಿ.16 ಪಿಇಎಸ್ 2007 ದಿನಾಂಕ 20-06-2007ರ ಪ್ರಕಾರ ಕರ್ನಾಟಕ ಅಬಕಾರಿ ಕಾಯಿದೆ 1965ರಡಿ ಪ್ರಕರಣಗಳನ್ನು ತನಿಖೆ ನಡೆಸಲು, ದಾಳಿ ಮಾಡಲು ಮತ್ತು ದೋಷಾರೋಪಣೆ ಪತ್ರ ಸಲ್ಲಿಸಲು ಪೊಲೀಸ್ ಉಪ-ನಿರೀಕ್ಷಕರಿಗಿಂತ ಕೆಳಗಿನ ಅಧಿಕಾರಿಗಳಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಆದರೆ ಪ್ರಸ್ತುತ ಪ್ರಕರಣದಲ್ಲಿ ತನಿಖೆ ಪೂರೈಸಿ ದೋಷಾರೋಪಣೆ ಪತ್ರ ಸಲ್ಲಿಸಿದ ಫ್ರಾಸಾ-4 ರವರು ಆ ಸಮಯದಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದೋಷಾರೋಪಣಾ ಪತ್ರ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡುದಿರುತ್ತಾರೆ. ಹಾಗಾಗಿ ಫ್ರಾಸಾ-4 ರವರಿಗೆ ದೋಷಾರೋಪಣಾ ಪತ್ರ ಸಲ್ಲಿಸಲು ಅಧಿಕಾರ ಇಲ್ಲದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಸದರಿ ಅಂಶವು ಅಭಿಯೋಜನೆ ಪ್ರಕರಣಕ್ಕೆ ಮಾರಕವಾಗಿರುತ್ತದೆ.

**21.** ಒಟ್ಟಾರೆಯಾಗಿ, ಈ ಪ್ರಕರಣದಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ವಿಮರ್ಶಿಸಿ ನೋಡಿದಾಗ ಆರೋಪಿಯಿಂದ ಮುದ್ದೆ ಮಾಲು-1 ಹಾಗೂ ಇತರ ಮದ್ಯದ ಪೌಚ್ ಗಳನ್ನು ನಿಪಿ-1 ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂಬುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ. ಆದರೆ ಇಲಾಖಾ ಸಾಕ್ಷಿಗಳನ್ನು ಹೊರತು ಪಡಿಸಿ ಯಾವುದೇ ಸಾಕ್ಷಿಗಳು ಅಭಿಯೋಜನೆಯ ಪ್ರಕರಣವನ್ನು ಪುಷ್ಠೀಕರಿಸಿ ಸಾಕ್ಷ್ಯ

ನುಡಿದಿರುವುದಿಲ್ಲ. ಬಹುಮುಖ್ಯವಾಗಿ ಪಂಚನಾಮೆ ಸಾಕ್ಷಿಗಳಾದ ಫ್ರಾಸಾ–1 ಮತ್ತು 2 ರವರು ಅಭಿಯೋಜನೆಯ ಪ್ರಕರಣವನ್ನು ಪುಷ್ಟೀಕರಿಸಿ ನಿಪಿ–1 ಪಂಚನಾಮೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಹಾಗಾಗಿ ಆರೋಪಿಯಿಂದ ಮುದ್ದೆ ಮಾಲು–1 ಹಾಗೂ ಇತರ ಮದ್ಯವನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂಬ ಅಂಶವನ್ನು ಸಾಬೀತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿರುವುದು ಕಂಡುಬರುತ್ತದೆ. ಜೊತೆಗೆ ವಶಪಡಿಸಿಕೊಳ್ಳಲಾಗಿದೆ ಎನ್ನಲಾದ ಮದ್ಯದ ಪೌಚ್ ಗಳ ಪೈಕಿ ಕೇವಲ 90 ಎಂ ಎಲ್ ನ 4 ಪೌಚ್ ಅನ್ನು ಮಾತ್ರ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ರಾಸಾಯನಿಕ ವಿಶ್ಲೇಷಣಾ ವರದಿ ಪಡೆದಿರುವುದು ಕಂಡುಬರುತ್ತದೆ. ಹಾಗಾಗಿ ಆರೋಪಿಯು ಕಾನೂನು ನಿಗಧಿ ಪಡಿಸಿದ್ದಕ್ಕಿಂತ ಹೆಚ್ಚಿನ ಮದ್ಯದ ಪ್ರಮಾಣವನ್ನು ಸ್ವಾಧೀನ ಹೊಂದಿದ್ದನು ಎಂಬ ಅಂಶವನ್ನು ಸಾಬೀತು ಪಡಿಸುವಲ್ಲಿ ಅಭಿಯೋಜನೆ ವಿಫಲವಾಗಿರುವುದು ಕಂಡುಬರುತ್ತದೆ. ಜೊತೆಗೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯನ್ನು ಮದ್ಯದೊಂದಿಗೆ ಹಿಡಿದು ನಿಪಿ–1 ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂಬುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ. ಆದ್ಯಾಗಿಯೂ ಸಹ ಯಾವುದೇ ಸ್ವತಂತ್ರ, ಪ್ರತ್ಯಕ್ಷ ಮತ್ತು ಸಾರ್ವಜನಿಕ ಸಾಕ್ಷಿಯನ್ನು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಿರುವುದು ಕಂಡುಬರುವುದಿಲ್ಲ. ಸದರಿ ಅಂಶವು ಸಹ ಅಭಿಯೋಜನೆ ಪ್ರಕರಣಕ್ಕೆ ಹಿನ್ನಡೆಯನ್ನುಂಟು ಮಾಡಿರುತ್ತದೆ. ಆದ್ದರಿಂದ ಅಭಿಯೋಜನೆಯು ಆರೋಪಿಸಿದಂತೆ ಆರೋಪಿಯು ಕಾನೂನು ಬಾಹಿರವಾಗಿ ಯಾವುದೇ ರಹದಾರಿ ಇಲ್ಲದೇ 90 ಎಂ.ಎಲ್ ನ 60 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಎಂಬ ಹೆಸರಿನ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಮಾರಾಟ ಮಾಡಲು ಸ್ವಾಧೀನ ಹೊಂದಿ ಸಾಗಾಟ ಮಾಡುತ್ತಿದ್ದಾಗ ಆತನಿಂದ ನಿಪಿ–1 ಪಂಚನಾಮೆ ಮೂಲಕ

ಮುದ್ದೆ ಮಾಲು−1 ಮತ್ತು ಇತರ ಮದ್ಯವನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ಮತ್ತು ಅವುಗಳಲ್ಲಿ ಮದ್ಯದ ಅಂಶವಿತ್ತು ಎಂಬ ಅಂಶವನ್ನು ನಿಸ್ಸಂಶಯವಾಗಿ ಸಾಬೀತುಪಡಿಸಲು ಅಭಿಯೋಜನೆಯವರು ಸಂಪೂರ್ಣ ಸಾಕ್ಷ್ಯಧಾರಗಳನ್ನು ಹಾಜರುಪಡಿಸಿರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿದೆ. ಹಾಗಾಗಿ ಅಭಿಯೋಜನೆಯ ಪ್ರಕರಣವು ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ಸದರಿ ಸಂಶಯದ ಲಾಭವನ್ನು ಆರೋಪಿಯು ಪಡೆಯಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು **ಅಂಶ−1 ಕ್ಕೆ ನಕಾರಾತ್ಮಕವಾಗಿ** ಉತ್ತರಿಸಲಾಗಿರುತ್ತದೆ.

22. **ಅಂಶ−2** : ಅಂಶ−1ಕ್ಕೆ ಸಂಬಂಧಪಟ್ಟಂತೆ ಮಾಡಿರುವ ಚರ್ಚೆಯಿಂದ ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, ಆರೋಪಿಯ ವಿರುದ್ಧ ಹೊರಿಸಿದ **ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34** ರ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧಗಳಿಂದ ಆರೋಪಿಯನ್ನು ಖುಲಾಸೆಗೊಳಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ರದ್ದಾಗತಕ್ಕದ್ದು.

ಈ ಪ್ರಕರಣದಲ್ಲಿ ಆರೋಪಿಯ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಯು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

ಈ ಪ್ರಕರಣದ ಮುದ್ದೆ ಮಾಲು-1 ಮದ್ಯದ ಪೌಚ್ ಬೆಲೆಬಾಳದ ವಸ್ತುಗಳಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಕಛೇರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಅವರು ಉಕ್ತೀಕರಿಸಿ, ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ **ದಿನಾಂಕ 24ನೇ ಅಕ್ಟೋಬರ್** 2025 ರಂದು ಉದ್ಘೋಷಿಸಿದ್ದೇನೆ)

**(ದೀಪು ಎಂ.ಟಿ )**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.**

# ಅ ನು ಬಂ ಧ

## 1. ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ:

| | |
|---|---|
| ಫ್ರಾಸಾ – 1 | : ರಾಮು |
| ಫ್ರಾಸಾ – 2 | : ಶಿವಕುಮಾರ |
| ಫ್ರಾಸಾ – 3 | : ಹೆಚ್ ಬಿ ರವಿ |
| ಫ್ರಾಸಾ – 4 | : ಎನ್ ರಂಗರಾಜು |
| ಫ್ರಾಸಾ – 5 | : ಎಂ ಮಂಜುನಾಥನಾಯ್ಕ |

## 2. ಅಭಿಯೋಜನೆಯವರು ನಿಶಾನೆಯಾಗಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ:

| | |
|---|---|
| ನಿಪಿ – 1 | : ಅಮಾನತ್ತು ಮಹಜರ್ |
| ನಿಪಿ – 1(ಎ) ಯಿಂದ (ಇ) | : ಸಾಕ್ಷಿದಾರರ ಸಹಿಗಳು |
| ನಿಪಿ – 2 ಮತ್ತು 3 | : ಸಾಕ್ಷಿದಾರರ ಹೇಳಿಕೆಗಳು |
| ನಿಪಿ – 4 | : ವರದಿ |
| ನಿಪಿ – 4(ಎ) ಮತ್ತು (ಬಿ) | : ಸಾಕ್ಷಿದಾರರ ಸಹಿಗಳು |
| ನಿಪಿ – 5 | : ಪ್ರಥಮ ವರ್ತಮಾನ ವರದಿ |
| ನಿಪಿ – 5(ಎ) | : ಸಾಕ್ಷಿದಾರರ ಸಹಿ |
| ನಿಪಿ – 6 | : ಎಫ್ ಎಸ್ ಎಲ್ ವರದಿ |
| ನಿಪಿ – 6(ಎ) | : ಸಾಕ್ಷಿದಾರರ ಸಹಿ |
| ನಿಪಿ – 7 | : ಪತ್ರ |
| ನಿಪಿ – 7(ಎ) | : ಸಾಕ್ಷಿದಾರರ ಸಹಿ |
| ನಿಪಿ – 8 | : ಜ್ಞಾಪನ ಪತ್ರ |
| ನಿಪಿ – 8(ಎ) | : ಸಾಕ್ಷಿದಾರರ ಸಹಿ |

3. **<u>ಅಭಿಯೋಜನೆಯು ಮುದ್ದೆ ಮಾಲಾಗಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ</u>**:

ಮುದ್ದೆ ಮಾಲು–1 : 4 ಮದ್ಯದ ಪೌಚ್ ಗಳು

4. **<u>ಆರೋಪಿತರು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ</u>: –ಇಲ್ಲ–**

5. **<u>ಆರೋಪಿತರು ನಿಶಾನೆಯಾಗಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ</u>: –ಇಲ್ಲ–**

**(ದೀಪು ಎಂ.ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.**

Visit **ecourts.gov.in** for updates or download mobile app "**eCourts Services**" from Android or Ios